**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

**ಎಸ್ .ಸಿ. ನಂಃ 48/2021**

ಪಿ.ಡಬ್ಲ್ಯೂ ನಂಃ **02**
ಸಿ.ಡಬ್ಲ್ಯೂ ನಂಃ **03**
ಸಾಕ್ಷಿಯನ್ನು ದಿನಾಂಕಃ **14-09-2023**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಾಳಪ್ಪ |
| ತಂದೆಯ ಹೆಸರು | ಃ | ಬಸಣ್ಣ ಮ್ಯಾಗೇರಿ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ಚೌಡಾಪುರ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ದಿಃ 29-4-2021 ರಂದು ಬೇವೂರು ಪೊಲೀಸರು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಪಂಚರಾಗಿ ಬರಬೇಕೆಂದು ಕರೆಸಿದ್ದರು. ನಮ್ಮೂರಿನ ಸುಮಿತ್ರಾ ಮತ್ತು ಆಕೆಯ ಮಗ ರಾಜೇಂದ್ರಪ್ರಸಾದ ತೀರಿಕೊಂಡಿದ್ದು, 2 ಶವಗಳ ತನಿಖಾ ಪಂಚನಾಮೆಗಳನ್ನು ಆಸ್ಪತ್ರೆಯಲ್ಲಿ ಪೊಲೀಸರು ತಯಾರಿಸಿ ನನಗೆ ಓದಿ ಹೇಳಿ ಸಹಿಗಳನ್ನು ಪಡೆದುಕೊಂಡರು. ಸಮಿತ್ರಾರವರ ಶವ ಪಂಚನಾಮೆಯನ್ನು ಮದ್ಯಾಹ್ನ 2-30 ರಿಂದ 3-30 ರ ವರೆಗೆ ಮಾಡಿದ್ದು, ರಾಜೇಂದ್ರಪ್ರಸಾದನ ಶವ ಪಂಚನಾಮೆಯನ್ನು ಸಂಜೆ 4 ರಿಂದ 5 ಗಂಟೆಯವರೆಗೆ ಜರುಗಿಸಲಾಯಿತು.

2). ಆ ದಿನ ಪೊಲೀಸರು ತಯಾರಿಸಿದ 2 ಶವ ಪಂಚನಾಮೆಗಳು ಈಗ ನೋಡಿದ ದಾಖಲೆಗಳಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ 2 ಮತ್ತು ನಿಪಿ 3 ಎಂತಲೂ, ಸಾಕ್ಷಿದಾರರ ಸಹಿಗಳನ್ನು ನಿಪಿ 2(ಎ) ಮತ್ತು ನಿಪಿ 3(ಎ) ಎಂದು ಗುರುತಿಸಲಾಯಿತು. ಆ ಸಮಯ ತೆಗೆಯಲಾದ 4 ಫೊಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ನಿಪಿ 6 ಮತ್ತು 7 ಫೊಟೋಗಳಲ್ಲಿ ನಾನು ಇತರೆ ಪಂಚರ ಮತ್ತು ಪೊಲೀಸರೊಂದಿಗೆ ಇರುವುದು ಕಾಣುತ್ತದೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್ ವೈ ಬಿ ವಕೀಲರಿಂದ

3). ಚಾಸಾ 1 ನನ್ನ ಅಣ್ಣನ ಮಗ. ಮೃತ ಸುಮಿತ್ರವ್ವ ನನ್ನ ಅಣ್ಣನ ಮಗಳು. ದಿಃ 29-4-2021 ರಂದು ಚಾಸಾ 1 ಫೋನು ಮಾಡಿ ನನ್ನನ್ನು ಆಸ್ಪತ್ರೆಯ ಬಳಿ ಮದ್ಯಾಹ್ನ

12 ಗಂಟೆಗೆ ಕರೆಸಿಕೊಂಡರು. ನಿಪಿ 2 ಮತ್ತು ನಿಪಿ 3 ಶವ ಪಂಚನಾಮೆಗಳನ್ನು ನಾನು ಹೋದ ನಂತರ ನನ್ನ ಎದುರೇ ಬರೆದು ವಿಚಾರವನ್ನು ಓದಿ ಹೇಳಿದ ಮೇಲೆ ನಾನು ಸಹಿಗಳನ್ನು ಮಾಡಿದೆ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಿಪಿಐ ರವರೇ ಆ ಪಂಚನಾಮೆಯನ್ನು ತಯಾರಿಸಿದರು. 2 ಪಂಚನಾಮೆಗಳನ್ನು ಒಂದೇ ಕಡೆ ಬರೆದರು. ನಾನು ವಿಚಾರವನ್ನು ತಿಳಿಸಿ ಪಂಚನಾಮೆಗಳನ್ನು ಬರೆಸಿರಲಿಲ್ಲ. ಪಂಚನಾಮೆಯನ್ನು ತಯಾರಿಸಿದ ಸಮಯ ನಾವು ಒಟ್ಟು 05 ಜನರು ಇದ್ದೆವು. ಚಾಸಾ 1, 2, 4, 6 ಮತ್ತು ಪೊಲೀಸ ಅಧಿಕಾರಿ ಇದ್ದೆವು. ಚಾಸಾ 2 ಮತ್ತು 4 ರವರನ್ನು ನಾನೇ ಕರೆದುಕೊಂಡು ಹೋಗಿದ್ದೆ. ಚಾಸಾ 2 ಮತ್ತು 4 ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು. ಪೊಲೀಸರೇ ಫೋಟೋ ತೆಗೆದರು ಆದರೆ ಅವರ ಹೆಸರು ಗೊತ್ತಿಲ್ಲ.

4). ಚಾಸಾ 2 ಇವರು ನಮ್ಮ ಊರಿನವರಾಗಿರುತ್ತಾರೆ. ನಮ್ಮಗಳ ಸಮಕ್ಷಮ ಆಸ್ಪತ್ರೆಯಲ್ಲಿ ಶವ ಪಂಚನಾಮೆಗಳನ್ನು ಪೊಲೀಸರು ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಪಂಚನಾಮೆಗಳಿಗೆ ನಾನು ಪೊಲೀಸ ಠಾಣೆಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನ ಸಂಬಂಧಿಯಾದ ಕಾರಣ ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು) ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ